ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಝಾನ್ಸಿ ಲಕ್ಷ್ಮೀಬಾಯಿ ರಸ್ತೆ
ಮೈಸೂರು-570005

MYSURU URBAN DEVELOPMENT AUTHORITY
Jhansi Lakshmi Bai Road
Mysuru - 570005

## ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಟೈಪ್-04, 05, 06 ಹೌಸಿಂಗ್‌ಗಳನ್ನು ಟೈಪ್-08 ಹೌಸಿಂಗ್ ಎಂದು ಪರಿಷ್ಕರಿಸಿರುವ ಕಟ್ಟಡ ನಕ್ಷೆಯ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಭವಿಷ್ಯದ ಅಭಿವೃದ್ಧಿಗಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಸತಿ ವಿನ್ಯಾಸ ನಕ್ಷೆಯ ತಾತ್ಕಾಲಿಕ ಅನುಮತಿ ಆದೇಶ

ವಿಷಯ: ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹುಲಿಕೆರೆ ಗ್ರಾಮದ ಸರ್ವೆ ನಂ.5/1, 5/2 ಮತ್ತು ಇತರೆಗಳಲ್ಲಿನ ಒಟ್ಟು 70ಎ-06ಗು ವಿಸ್ತೀರ್ಣದ ಜಮೀನಿಗೆ ಅನುಮೋದಿಸಿರುವ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಟೈಪ್-04, 05, 06 ಹೌಸಿಂಗ್‌ಗಳನ್ನು ಟೈಪ್-08 ಹೌಸಿಂಗ್ ಎಂದು ಪರಿಷ್ಕರಿಸಲು ಹಾಗೂ ಭವಿಷ್ಯದ ಅಭಿವೃದ್ಧಿಗಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ: 18-04-2022, 08-09-2022 &17-02-2023.
2. ಸರ್ಕಾರದ ಆದೇಶ ಸಂಖ್ಯೆ: ನಅಇ 621 ಮೈಅಪ್ರಾ 2010, ಬೆಂಗಳೂರು ದಿನಾಂಕ:26-11-2010
3. ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 04 ದಿನಾಂಕ:22-03-2011
4. ಪ್ರಾಧಿಕಾರದ ಮಾರ್ಪಾಡಿತ ವಸತಿ ಅಭಿವೃದ್ಧಿ ನಕ್ಷೆ ಅನುಮೋದನೆ ಆದೇಶ ಸಂಖ್ಯೆ: ಮೈನಪ್ರಾ: ನಯೋ: ವ.ವಿ.ಅ:128:11-12 ದಿನಾಂಕ:08-03-2012
5. ಪ್ರಾಧಿಕಾರದ ಪ್ರಮಾಣ ಪತ್ರ ಸಂಖ್ಯೆ: ಮೈನಪ್ರಾ/ಪ್ರಾಪ್ರಪ/2022/2013-14 ದಿನಾಂಕ:30-03-2013, ಮೈನಪ್ರಾ/ಪ್ರಾಪ್ರಪ/345/2013-14 ದಿನಾಂಕ:20-06-2013, ಮೈನಪ್ರಾ/ಪ್ರಾಪ್ರಪ/312/2015-16 ದಿನಾಂಕ:03-06-2015 & ಮೈನಪ್ರಾ/ಪ್ರಾಪ್ರಪ/205/2017-18 ದಿನಾಂಕ:12-05-2017
6. ಪ್ರಾಧಿಕಾರದ ಕಟ್ಟಡ ಪೂರ್ಣಗೊಂಡ ವರದಿ ಪತ್ರ ಸಂಖ್ಯೆ: MUDA/SE/CR/24/2017-18 Dt:20.09.2017
7. ಪ್ರಾಧಿಕಾರದ Occupance certificate ಪತ್ರ ಸಂಖ್ಯೆ: MUDA:SE:CR:07:2022-23 Dt:19-05-2022
8. ಪ್ರಾಧಿಕಾರದ Occupance certificate ಪತ್ರ ಸಂಖ್ಯೆ: MUDA:SE:CR:07:2022-23 Dt:19-05-2022
9. ಅರ್ಜಿದಾರರ ಮನವಿ ದಿನಾಂಕ:15-03-2023
10. ಘನ ಉಚ್ಚ ನ್ಯಾಯಾಲಯದಲ್ಲಿನ ರಿಟ್ ಪಿಟಿಷನ್ ಕಂಪನಿ ಅಪ್ಲಿಕೇಷನ್ ನಂಬರ್ 533/2014: ಕಂಪನಿ ಪಿಟಿಷನ್ ನಂಬರ್:112/1994 ದಿನಾಂಕ:21-08-2014ರ ಆದೇಶ.

*-*-*-*-*-*

## ಪ್ರಸ್ತಾವನೆ:

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಮನವಿಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹುಲಿಕೆರೆ ಗ್ರಾಮದ ಸರ್ವೆ ನಂ.5/1, 5/2 ಮತ್ತು ಇತರೆಗಳಲ್ಲಿನ ಒಟ್ಟು 70ಎ-06ಗು ವಿಸ್ತೀರ್ಣದ ಜಮೀನಿಗೆ ಅನುಮೋದಿಸಿರುವ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಟೈಪ್-04, 05, 06 ಹೌಸಿಂಗ್‌ಗಳನ್ನು ಟೈಪ್-08 ಹೌಸಿಂಗ್ ಎಂದು ಪರಿಷ್ಕರಿಸಲು ಹಾಗೂ ಭವಿಷ್ಯದ ಅಭಿವೃದ್ಧಿಗಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಲಾಗಿದೆ. ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಹುಲಿಕೆರೆ ಗ್ರಾಮದ ಸರ್ವೆ ಸಂಖ್ಯೆ:07, 8/1, 147 ಮತ್ತು ಇತರೆಗಳಲ್ಲಿನ ಒಟ್ಟು 51ಎ-24ಗುಂಟೆ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲಾಗಿದೆ. ಉಲ್ಲೇಖ(3)ರ ಪ್ರಾಧಿಕಾರದ ಸಭೆಯಲ್ಲಿ ಸದರಿ ಜಮೀನಿಗೆ ವಸತಿ ಸಮುಚ್ಚಯ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನವಾಗಿರುತ್ತದೆ. ಸಭೆಯ ನಿರ್ಣಯದಂತೆ ಉಲ್ಲೇಖ(4)ರಲ್ಲಿ ಮಾರ್ಪಾಡಿತ ವಸತಿ ಅಭಿವೃದ್ಧಿ ನಕ್ಷೆ ಅನುಮೋದನೆ ನೀಡಲಾಗಿದೆ. ಉಲ್ಲೇಖ(5)ರಲ್ಲಿ ಟೈಪ್-01, 02, 03, 04, 05, 06, 07 ಹೌಸಿಂಗ್ ಮತ್ತು ಟವರ್-ಎ, ಬಿ, ಸಿ, ಡಿ, ಇ, ಎಫ್, ಜಿ ಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

..2

ಉಲ್ಲೇಖ(6)ರಲ್ಲಿ ಟೈಪ್-01,02,03 ಹೌಸಿಂಗ್ ಕಟ್ಟಡಗಳಿಗೆ ಕಟ್ಟಡ ಪೂರ್ಣಗೊಂಡ ವರದಿ, ಉಲ್ಲೇಖ(7)ರಲ್ಲಿ ಟವರ್-ಇ, ಎಫ್, ಜಿ ಕಟ್ಟಡಗಳಿಗೆ Occupance certificate ಹಾಗೂ ಉಲ್ಲೇಖ(8)ರಲ್ಲಿ ಟೈಪ್-07 ಹೌಸಿಂಗ್ ಕಟ್ಟಡಗಳಿಗೆ Occupance certificate ನೀಡಲಾಗಿದೆ. ಉಲ್ಲೇಖ(9)ರನ್ವಯ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಉಲ್ಲೇಖ(10)ರ ಘನ ನ್ಯಾಯಾಲಯದ ಆದೇಶದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 17ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ ಪ್ರಕರಣ 32ರನ್ವಯ ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾದ ಉದ್ಯಾನವನ, ನಾಗರೀಕ ಸೌಕರ್ಯ ನಿವೇಶನ, ಸಾರ್ವಜನಿಕ ಉಪಯುಕ್ತತೆ ಜಾಗ ಮತ್ತು ರಸ್ತೆ ಪ್ರದೇಶವನ್ನು (ಡ್ರೈವ್ ವೇ ಹೊರತುಪಡಿಸಿ) ಪ್ರಾಧಿಕಾರದಲ್ಲಿರುವ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ಸಂಖ್ಯೆ **SRP-1-09023-2022-23** ಆಗಿ ಸಿ.ಡಿ.ನಂಬರ್ **SRPD1214** ನೇದ್ದರಲ್ಲಿ **ದಿನಾಂಕ:21-03-2023**ರಂದು ನೋಂದಣಿ ಮಾಡಿ ಪರಿಷ್ಕೃತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಮೈನಪ್ರಾ:ನಯೋಶಾ:ವಿನ್ಯಾಸ: 208 :2022-23, ದಿನಾಂಕ:**

ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೋಳ ಹೋಬಳಿ, ಹುಲಿಕೆರೆ ಗ್ರಾಮದ ಸರ್ವೆ ನಂ.5/1, 5/2 ಮತ್ತು ಇತರೆಗಳಲ್ಲಿನ ಒಟ್ಟು 70ಎ-06ಗು ವಿಸ್ತೀರ್ಣದ ಜಮೀನಿಗೆ ಅನುಮೋದಿಸಿರುವ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಟೈಪ್-04, 05, 06 ಹೌಸಿಂಗ್‌ಗಳನ್ನು ಟೈಪ್-08 ಹೌಸಿಂಗ್ ಎಂದು ಪರಿಷ್ಕರಿಸಿರುವ ಕಟ್ಟಡ ನಕ್ಷೆಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 15ರನ್ವಯ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಭವಿಷ್ಯದ ಅಭಿವೃದ್ಧಿಗಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 17-2(ಎ)ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ ಪ್ರಕರಣ 32ರನ್ವಯ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಸತಿ ಉದ್ದೇಶದ ಬಡಾವಣೆಯನ್ನು ಅಭಿವೃದ್ಧಿಪಡಿಸಲು ವಿನ್ಯಾಸ ನಕ್ಷೆಗೆ ತಾತ್ಕಾಲಿಕವಾಗಿ ಅನುಮತಿ ಆದೇಶ ನೀಡಲಾಗಿದೆ.

**ಷರತ್ತುಗಳು:**

1. ಟೈಪ್-08 ಹೌಸಿಂಗ್ ಕಟ್ಟಡ ಪೂರ್ಣಗೊಳಿಸಲು 02 ವರ್ಷ ಕಾಲಾವಕಾಶ ನೀಡಲಾಗಿದೆ. ಆ ಸಮಯದಲ್ಲಿ ಪೂರ್ಣಗೊಳಿಸದಿದ್ದಲ್ಲಿ, ಕಟ್ಟಡ ನಕ್ಷೆ ನವೀಕರಣ ಪಡೆಯತಕ್ಕದ್ದು ಹಾಗೂ ನಿಗಧಿತ ಅವಧಿಯಲ್ಲಿ ಕಟ್ಟಡ ಪೂರ್ಣಗೊಂಡಲ್ಲಿ ಕಟ್ಟಡ ಪೂರ್ಣಗೊಂಡ ವರದಿಯನ್ನು ಪ್ರಾಧಿಕಾರದ ತಾಂತ್ರಿಕ ಶಾಖೆಯಿಂದ ಪಡೆಯತಕ್ಕದ್ದು.
2. **ಈ ಅನುಮೋದನೆಯನ್ನು ಘನ ಉಚ್ಚ ನ್ಯಾಯಾಲಯದಲ್ಲಿನ ರಿಟ್ ಪಿಟಿಷನ್ ಕಂಪನಿ ಅಪ್ಲಿಕೇಷನ್ ನಂಬರ್ 533/2014: ಕಂಪನಿ ಪಿಟಿಷನ್ ನಂಬರ್:112/1994 ದಿನಾಂಕ:21-08-2014ರ ಆದೇಶದನ್ವಯ ನೀಡಲಾಗಿದೆ.**
3. **ಈ ಅನುಮೋದನೆ ಕೇವಲ ಟೈಪ್-08 ಹೌಸಿಂಗ್ ಮತ್ತು ವಸತಿ ಬಡಾವಣೆ ನಕ್ಷೆಗೆ ಸೀಮಿತವಾಗಿದ್ದು, ಉಳಿದಂತೆ ಈ ಹಿಂದಿನ ಅನುಮೋದನೆಗಳು ಯಥಾವತ್ತಾಗಿ ಜಾರಿಯಲ್ಲಿರುತ್ತವೆ. ಯಾವುದೇ ಅನುಮೋದನೆಗಳನ್ನು ರದ್ದುಪಡಿಸಿರುವುದಿಲ್ಲ.**
4. **ಅರ್ಜಿದಾರರ ಮನವಿ ದಿನಾಂಕ:17-02-2023ರನ್ವಯ ಸೆಂಟ್ರಲ್ ಟವರ್-ಸಿ ಗೆ ದಿನಾಂಕ:30-03-2013ರಲ್ಲಿ ನೀಡಲಾದ ಅನುಮೋದನೆಯನ್ನು ರದ್ದುಪಡಿಸಲಾಗಿದೆ.**
5. **ದಿನಾಂಕ:11-03-2023ರ ಮನವಿಯಲ್ಲಿ ತಿಳಿಸಿರುವಂತೆ ಸದರಿ ವಿನ್ಯಾಸದಲ್ಲಿ ಆಗಿರುವ ವ್ಯತ್ಯಾಸಗಳನ್ನು ಸರಿಪಡಿಸಿಕೊಳತಕ್ಕದ್ದು ಹಾಗೂ ಈ ಸಂಬಂಧ ಯಾವುದೇ ತಂಟೆ/ತಕರಾರು ಉಂಟಾದಲ್ಲಿ ಅರ್ಜಿದಾರರೇ ಜವಾಬ್ದಾರರಾಗಿರುತ್ತಾರೆ.**
6. **ಸದರಿ ವಿನ್ಯಾಸದಲ್ಲಿರುವ ಬಂಡಿದಾರಿಯನ್ನು ಹಾಗೂ ರಸ್ತೆ ಪ್ರದೇಶಗಳು ಸಾರ್ವಜನಿಕರಿಗೆ ಉಪಯೋಗಿಸಲು ಯಾವುದೇ ತೊಡಕು ಉಂಟುಮಾಡತಕ್ಕದ್ದಲ್ಲ ಹಾಗೂ ಸಾರ್ವಜನಿಕರಿಗೆ ಮುಕ್ತವಾಗಿ ಸಂಚರಿಸಲು ಅನುವು ಮಾಡತಕ್ಕದ್ದು.**

..3

**ಆದೇಶ ಸಂಖ್ಯೆ:ಮೈನಪ್ರಾ:ನಯೋಶಾ:ವಿನ್ಯಾಸ: 208 :2022-23, ದಿನಾಂಕ:**

7. ಈ ಪತ್ರದೊಂದಿಗೆ ಅಭಿವೃದ್ಧಿಪಡಿಸಬೇಕಾದ ವಿನ್ಯಾಸ ನಕ್ಷೆಯನ್ನು ನೀಡಲಾಗುತ್ತಿದ್ದು, ಅದರಲ್ಲಿನ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ ಹಾಗೂ ಸದರಿ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಕೆಲಸಗಳನ್ನು ಪ್ರಾರಂಭಿಸತಕ್ಕದಲ್ಲ.

8. ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.

9. ಬಡಾವಣೆ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಪ್ರಾಧಿಕಾರದಿಂದ ಕಾಮಗಾರಿ ಕಾರ್ಯಾದೇಶವನ್ನು ಪಡೆಯತಕ್ಕದ್ದು ಹಾಗೂ ಅದರಂತೆ ಅಭಿವೃದ್ಧಿಪಡಿಸುವುದು. ವಿನ್ಯಾಸದಲ್ಲಿನ ರಸ್ತೆ ಕಾಮಗಾರಿಗಳನ್ನು ಪ್ರಾಧಿಕಾರದ ತಾಂತ್ರಿಕ ಶಾಖೆಯ ನಿರ್ದೇಶನಗಳ ಪ್ರಕಾರ ಪೂರ್ಣಗೊಳಿಸತಕ್ಕದ್ದು.

10. ಬಡಾವಣೆ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರವು ವಿಧಿಸುವ ಇತರೇ ಶುಲ್ಕಗಳನ್ನು ಪಾವತಿಸತಕ್ಕದ್ದು. ಬಡಾವಣೆ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಪ್ರಾಧಿಕಾರದ ತಾಂತ್ರಿಕ ಶಾಖೆಯಿಂದ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

11. ಕುಡಿಯುವ ನೀರು ಸರಬರಾಜು ಮತ್ತು ಮಲಿನ ನೀರು ಶುದ್ಧೀಕರಿಸುವ ಘಟಕವನ್ನು ಸೂಕ್ತವಾಗಿ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅನುಮತಿ ಪಡೆದು ಅದರ ನಿರ್ದೇಶನದನ್ವಯ ಕಾರ್ಯ ನಿರ್ವಹಿಸಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

12. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಮಂಡಳಿಯಿಂದ ಅನುಮತಿ ಪಡೆದು ಅದರ ನಿರ್ದೇಶನದನ್ವಯ ಕಾರ್ಯ ನಿರ್ವಹಿಸಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

13. ಬಡಾವಣೆಯಲ್ಲಿ ಮಳೆ ನೀರು ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ ಕಲ್ಪಿಸತಕ್ಕದ್ದು.

14. ಬಡಾವಣೆಯಲ್ಲಿನ ರಸ್ತೆಗಳ ಎರಡೂ ಬದಿಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಗಿಡ/ಮರಗಳನ್ನು ಬೆಳೆಸತಕ್ಕದ್ದು.

15. ಈ ಸಂದರ್ಭದಲ್ಲಿ ಇರುವ ಕಾನೂನಿನ ಅಡಿಯಲ್ಲಿ ಹಾಗೂ ಅರ್ಜಿದಾರರು ಸಲ್ಲಿಸಿರುವ ದಾಖಲೆಗಳ ಮತ್ತು ಮಾಹಿತಿಗಳ ಆಧಾರದ ಮೇಲೆ ವಸತಿ ವಿನ್ಯಾಸ ನಕ್ಷೆಯನ್ನು ಸಿದ್ದಪಡಿಸಲಾಗಿದೆ. ಯಾವುದೇ ಕಾನೂನಾತ್ಮಕ ತಕರಾರುಗಳಿಗೆ ಅರ್ಜಿದಾರರೇ ಹೊಣೆಗಾರರಾಗಿದ್ದು, ಪ್ರಾಧಿಕಾರ ಜವಾಬ್ದಾರಿಯಾಗುವುದಿಲ್ಲ.

16. ಬಡಾವಣೆಯ ಸುತ್ತಾ ಆವರಣ ಗೋಡೆ ನಿರ್ಮಿಸುವಂತಿಲ್ಲ ಹಾಗೂ ನಕ್ಷೆಯಲ್ಲಿ ತೋರಿಸಿರುವ ರಸ್ತೆಗಳಿಗೆ ಅಡ್ಡಲಾಗಿ ಯಾವುದೇ ತಡೆಗೋಡೆಗಳನ್ನು ನಿರ್ಮಿಸದೇ ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿಡತಕ್ಕದ್ದು.

17. ಪ್ರಶ್ನಿತ ಜಮೀನಿನಲ್ಲಿ ಖರಾಬು ಜಾಗಗಳು ಇದ್ದಲ್ಲಿ, ಸದರಿ ಜಾಗವು ಸರ್ಕಾರಿ ಜಮೀನಾಗಿದ್ದು, ಆ ಪ್ರದೇಶವನ್ನು ಖುಲ್ಲಾ ಇಡತಕ್ಕದ್ದು.

18. **ಅಂತಿಮ ವಿನ್ಯಾಸ ನಕ್ಷೆ ಅನುಮೋದನೆ ಪಡೆಯುವ ಪೂರ್ವದಲ್ಲಿ ರಿಯಲ್‌ಎಸ್ಟೇಟ್ ನಿಯಂತ್ರಣಾ ಪ್ರಾಧಿಕಾರದಲ್ಲಿ(RERA)ನೊಂದಣಿ ಮಾಡಿಸುವ ಷರತ್ತಿಗೊಳಪಡಿಸಿದೆ.**

19. **ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವ ಸಂಬಂಧ ಶುಲ್ಕದ ಬಗ್ಗೆ ಲೆಕ್ಕ ತಪಾಸಣಾ ಕಾಲದಲ್ಲಿ ಆಕ್ಷೇಪಣೆ ಬಂದಲ್ಲಿ ಆಕ್ಷೇಪಣಾ ಮೊಬಲಗನ್ನು ಪಾವತಿಸಬೇಕೆಂಬ ಷರತ್ತಿಗೆ ಒಳಪಟ್ಟಿರುತ್ತದೆ.**

20. ಈ ನಕ್ಷೆಯನ್ನು ಬಡಾವಣೆ ಅಭಿವೃದ್ಧಿಪಡಿಸಲು ಮಾತ್ರ ಉಪಯೋಗಿಸತಕ್ಕದ್ದು, ಅಂತಿಮ ನಕ್ಷೆ ಅನುಮೋದನೆಯಾಗುವವರೆಗೂ ಯಾವುದೇ ನಿವೇಶನಗಳ ಮಾರಾಟವನ್ನು/ನೋಂದಣಿಯನ್ನು ಮಾಡತಕ್ಕದ್ದಲ್ಲ.

21. **ಪ್ರಶ್ನಿತ ಜಮೀನಿಗೆ ಸಂಬಂಧಿಸಿದಂತೆ ಉದ್ಭವವಾಗುವ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು** ಜವಬ್ದಾರಿಯಾಗಿರುವುದಿಲ್ಲ.

..4

**ಆದೇಶ ಸಂಖ್ಯೆ:ಮೈನಪ್ರಾ:ನಯೋಶಾ:ವಿನ್ಯಾಸ: :2022-23, ದಿನಾಂಕ:**

22. ಅನುಮೋದಿತ ಬಡಾವಣೆಯಲ್ಲಿ ಕೊಳವೆ ಬಾವಿಯನ್ನು ಕೊರೆಯುವಾಗ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದಂತೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ತೆರೆದ ಕೊಳವೆ ಬಾವಿಗಳ ಬಗ್ಗೆ ಭೂ ಮಾಲೀಕರುಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿ:31-12-2012 & 06-08-2014ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೇ ಕ್ರಮವಹಿಸತಕ್ಕದ್ದು.

23. ಅರ್ಜಿದಾರರು ಯಾವುದೇ ಅಸತ್ಯ ದಾಖಲೆ ನೀಡಿರುವುದು ಕಂಡುಬಂದಲ್ಲಿ ಅಥವಾ ಮೇಲ್ಕಂಡ ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ ಮಂಜೂರಾತಿಯು (ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 76(ಂ)ರಂತೆ) ತನ್ನಂತೆ ತಾನೇ ರದ್ದುಗೊಳ್ಳುತ್ತದೆ ಎಂದು ತಿಳಿಯತಕ್ಕದ್ದು.

24. ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ, ಕಾಮಗಾರಿಗಳು ತೃಪ್ತಿಕರಗಾಗಿ ಪೂರ್ಣಗೊಂಡಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರವನ್ನು ಪಡೆದು ಸಲ್ಲಿಸಿ, ಪ್ರಾಧಿಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2-ಬಿ)ರನ್ವಯ ಅಂತಿಮ ವಿನ್ಯಾಸ ನಕ್ಷೆಯ ಅನುಮೋದನೆ ಪಡೆಯತಕ್ಕದ್ದು.

25. ಅಭಿವೃದ್ಧಿ ಕೆಲಸವನ್ನು ಪ್ರಾರಂಭಿಸುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ C.F.E. ಪಡೆದು ಸಲ್ಲಿಸತಕ್ಕದ್ದು ಹಾಗೂ ವಿನ್ಯಾಸದಂತೆ ಅಭಿವೃದ್ಧಿ ಕಾಮಗಾರಿಗಳು ಸಂಪೂರ್ಣವಾಗಿ ಪೂರ್ಣಗೊಂಡ ನಂತರ ಸದರಿ ಸಂಸ್ಥೆಯವರಿಂದ C.F.O. ಪಡೆಯತಕ್ಕದ್ದು.

21/03/2023

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು.

ಮೇ॥ ಜುವಾರಿ ಇನ್ಫ್ರಾವರ್ಡ್ ಪ್ರೈ.ಲಿ
ಅಡ್ವೆಂಟ್ಸ್ ಸೆಂಟರ್, 1ನೇ ಮಹಡಿ, ನಂ.28, ಯುನಿಯನ್ ಸ್ಟ್ರೀಟ್,
ಆಫ್ ಕಬ್ಬನ್ ರಸ್ತೆ, ಬೆಂಗಳೂರು-560001.